

ವಾಟ್ಸ್‌ಆಪ್ ಮೂಲಕ ಯುವಕ, ಯುವತಿ ಸ್ನೇಹಿತರಾಗಿ, ಹುಡುಗ ಮದುವೆಗೆ ಒಪ್ಪಿದ್ದರಿಂದ ಯುವತಿ ಲೈಂಗಿಕ ಸಂಪರ್ಕಕ್ಕೆ ಒಪ್ಪುತ್ತಾಳೆ. ಇದು ಒಂದು ವರ್ಷ ಮುಂದುವರೆಯುತ್ತದೆ. ಆದರೆ ಬಳಿಕ ಯುವಕ ಮದುವೆಯಾಗಲು ನಿರಾಕರಿಸುತ್ತಾನೆ. ಮದುವೆಯಾಗಲು ನಿರಾಕರಿಸಿದ್ದಕ್ಕಾಗಿ, ಅತ್ಯಾಚಾರದ ದೂರು ದಾಖಲಿಸುತ್ತಾಳೆ ಯುವತಿ.

* * *

ಈ ಮೇಲಿನ ಘಟನೆಗಳನ್ನು ಅವಲೋಕಿಸಿದಾಗ ಪುರುಷನಲ್ಲದೆ, ಮಹಿಳೆಯ ನಿರ್ಲಕ್ಷ್ಯ, ಬೇಜವಾಬ್ದಾರಿ, ದುಡುಕು ಸಹ ಇಂಥ ಘಟನೆಗೆ ಕಾರಣವೆನಿಸುತ್ತದೆ. ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆ ನಡೆಸಿದ ಸಮೀಕ್ಷೆ ಪ್ರಕಾರ ಪ್ರೇಮ ಚೆಲ್ಲಾಟ, ಪ್ರಣಯ ವಿಲಾಸಿ, ಮದ್ಯಪಾನಿ, ಸಮಾಗಮಕ್ಕೆ ನಿರಾಕರಿಸದ ಸ್ತ್ರೀ ಭಾಗಶಃ ಅತ್ಯಾಚಾರಕ್ಕೆ ಬಲಿಯಾಗುತ್ತಾಳೆ.

ಹೀಗೆಂದಾಗ ಕೆಲವು ಪ್ರಶ್ನೆಗಳು ಎದುರಾಗುತ್ತವೆ. ಮಹಿಳೆ ಮುಕ್ತವಾಗಿರುವದು ತಪ್ಪೇ? ಇದು. ವ್ಯಕ್ತಿಗತ ಸ್ವಾತಂತ್ರ್ಯಕ್ಕೆ ಅಡ್ಡಿಯಾಗದೇ? ಮಹಿಳೆಯ ಹಕ್ಕಿನ ಉಲ್ಲಂಘನೆ ಅಲ್ಲವೇ? ನಡುರಾತ್ರಿ ಮಹಿಳೆ ಒಂಟಿಯಾಗಿ ಓಡಾಡುವುದು ಸ್ತ್ರೀ ಸ್ವಾತಂತ್ರ್ಯ ಎಂದಿದ್ದಾರಲ್ಲಾ ರಾಷ್ಟ್ರಪಿತ? ಸಿಂಗಾಪುರ ಸೇರಿದಂತೆ ಕೆಲವು ಕೊಲ್ಲಿ ರಾಷ್ಟ್ರಗಳಲ್ಲಿ ಮಹಿಳೆಯ ನೆರಳನ್ನು ನೋಡಲು ಜನ ಹೆದರುತ್ತಾರೆ. ನಮ್ಮಲ್ಲೇಕೆ ಹೀಗೆ? ಈ ದೇಶಗಳ ಜನಸಂಖ್ಯೆ ಮತ್ತು ವಿಸ್ತಾರ ಕಡಿಮೆ. ಇಲ್ಲಿ ಸಾಕ್ಷರತೆ ಹೆಚ್ಚು. ಮಹಿಳೆಗೆ ಗೌರವಿಸ ಬೇಕು ಎಂಬ ಸಂಸ್ಕೃತಿ ಮತ್ತು ಕಾನೂನಿನ ಅರಿವು ಮತ್ತು ಭಯವಿದೆ. ಹೀಗಾಗಿ ಯಾವುದೇ ಕಾನೂನು, ಕಾರ್ಯನೀತಿಯ ಪರಿಣಾಮಕಾರಿ ಅನುಷ್ಠಾನ ಮತ್ತು ಮೇಲ್ವಿಚಾರಣೆ ಸುಲಭ. ಇದಲ್ಲದೆ ಇಲ್ಲಿನ ಕಾನೂನು ತುಂಬ ಬಿಗಿ. ತಪ್ಪು ಮಾಡಿದ ಶೇ.90 ಜನರಿಗೆ ಶಿಕ್ಷೆಯಾಗುತ್ತದೆ. ಲೈಂಗಿಕ ಅಪರಾಧಕ್ಕೆ ಬೆರಳು ಕತ್ತರಿಸುವುದು, ಚಾಟಿ ಏಟು, ಪುರುಷತ್ವ ಹರಣದಂತಹ ಉಗ್ರ ಶಿಕ್ಷೆಗಳಿವೆ. ಹೀಗಾಗಿ ಶಿಕ್ಷೆಯ ಭಯ ಹೆಚ್ಚು. ಈ ಎಲ್ಲ ಕಾರಣದಿಂದಾಗಿ ಸುಲಭವಾಗಿ ಅಪರಾಧಗಳಲ್ಲಿ ಭಾಗಿಯಾಗಲಾರರು.

ರಾಷ್ಟ್ರಪಿತನ ಮಾತು ಕಾರ್ಯರೂಪಕ್ಕೆ ಬರಬೇಕಾದರೆ ಕಾನೂನು ಸುಧಾರಣೆ, ಸಾರ್ವಜನಿಕರ ನೈತಿಕ ಮತ್ತು ಶಿಕ್ಷಣ ಮಟ್ಟ ಹೆಚ್ಚಾಗಬೇಕು. ಕಾನೂನು ಬಗ್ಗೆ ಜನ ಜಾಗೃತಿ ಅವಶ್ಯ. ಇವೆಲ್ಲಾ ಕಾರ್ಯರೂಪಕ್ಕೆ ಬರಬೇಕಾದರೆ ಸಮಯ ಬೇಕು. (ರಾಷ್ಟ್ರಪಿತ ಹೇಳಿದ್ದು ಸುಮಾರು 70 ವರ್ಷದ ಹಿಂದೆ. ಇನ್ನು ಸಮಯ ಬೇಕೆ ಎನ್ನುವುದು ಬೇರೆ ವಿಷಯ). ಅಲ್ಲಿಯವರೆಗೆ ನಮ್ಮ ಸುರಕ್ಷತೆಯಲ್ಲಿ ನಾವಿರುವುದು ಹೆಚ್ಚು ಅರ್ಥಪೂರ್ಣ ಅಲ್ಲವೇ?


ನಮ್ಮ ಮನೆ ಕಳ್ಳರಿಗೆ ಶಿಕ್ಷೆಯಾಗುತ್ತದೆ, ಕದ್ದ ಸಾಮಾನು ತಿರುಗಿ ಬರುತ್ತದೆ ಎಂಬ ಕಾನೂನಿದ್ದರೂ, ಮನೆಯಿಂದ ಹೊರ ಹೋಗುವಾಗ ಮನೆಗೆ ಬೀಗ ಹಾಕುತ್ತೇವೆ. ಬೆಲೆ ಬಾಳುವ ವಸ್ತುವನ್ನು ಬ್ಯಾಂಕ್ ಲಾಕರ್ ಅಥವಾ ಸಂಬಂಧಿ ಮನೆಯಲ್ಲಿಡುತ್ತೇವೆ. ಮನೆ ರಕ್ಷಣೆಗೆ ಕಾನೂನುಗಳಿದ್ದರೂ ,ನಮ್ಮ ಸುರಕ್ಷತೆಯಲ್ಲಿರುವದಿಲ್ಲವೇ? ಇದು ಪ್ರಾಪಂಚಿಕ ವಸ್ತುಗಳಿಗಾಗಿ ನಾವು ತೆಗೆದುಕೊಳ್ಳುವ ಮುಂಜಾಗ್ರತೆ. ಆದರೆ ಜೀವನ ಮತ್ತು ಮನಸ್ಸಿಗೆ ಅಳಿಸಲಾಗದ ಘಾಸಿ ಮಾಡುವ ಲೈಂಗಿಕ ಕಿರುಕುಳದಂತಹ ಘಟನೆಯಿಂದ ರಕ್ಷಿಸಿಕೊಳ್ಳುವಲ್ಲಿ ನಮ್ಮ ನಿರ್ಲಕ್ಷ್ಯ ಅಪಾಯಕಾರಿಯಲ್ಲವೇ?

## ಮುಂಜಾಗ್ರತಾ ಕ್ರಮಗಳು

ಅವಸರದಲ್ಲಿ ಯಾವುದೇ ವಾಹನ ಹತ್ತಬೇಡಿ. ಎಲ್ಲಿಗೆ, ಹೇಗೆ ಹೋಗುವುದು, ಸುರಕ್ಷಿತ ಮಾರ್ಗ ಮತ್ತು ಸಮಯವನ್ನು ಮೊದಲೇ ನಿರ್ಧರಿಸಿ ವಾಹನದ ಒಳ ಬನ್ನಿ. ಒಳ ಬಂದ ನಂತರ ಮೊಬೈಲ್ ಬಳಸಬೇಡಿ. ಸ್ವರಕ್ಷಣೆಯತ್ತ ಮನಸ್ಸಿರಲಿ. ನಿಮ್ಮ ಗಮನ ಚಾಲಕ, ಮಾರ್ಗದತ್ತ ಇರಲಿ. ಚಾಲಕನಿಗೆ ಅರ್ಥವಾಗುವ ಭಾಷೆಯಲ್ಲಿ ಹಾಗೂ ಈತನಿಗೆ ಕೇಳುವ ಹಾಗೆ ವಾಹನ ಸಂಖ್ಯೆ, ಸಾಧ್ಯವಾದರೆ ಚಾಲಕನ ಹೆಸರನ್ನು ಮನೆಯವರಿಗೆ ಫೋನ್ ಮೂಲಕ ತಿಳಿಸಿ ಅಥವಾ ತಿಳಿಸಿದಂತೆ ನಟಿಸಿ. ತಾನು ನಿಗಾವಣೆಯಲ್ಲಿದ್ದೇನೆಂದು ಚಾಲಕ ನಿಮ್ಮನ್ನು ಸುರಕ್ಷಿತವಾಗಿ ಮನೆ ತಲುಪಿಸುತ್ತಾನೆ. ಸಂಶಯ ಬಂದರೆ ಕೂಡಲೆ ಇಳಿದು ಬಿಡಿ.

ಚಾಲಕ ನಿಮ್ಮನ್ನು ತಪ್ಪು ದಾರಿಯಲ್ಲಿ ಒಯ್ಯುತ್ತಿದ್ದರೆ ಮತ್ತು ನಿಮಗೆ ಇಳಿಯಲು ಅವಕಾಶ ನೀಡದಿದ್ದರೆ, ನಿಮ್ಮ ದುಪ್ಪಟ್ಟಾ ಅಥವಾ ಹ್ಯಾಂಡ್ ಬ್ಯಾಗಿನ ಪಟ್ಟಿಯನ್ನು ಕುಣಿಕೆ ಮಾಡಿ, ವಾಹನ ಚಾಲಕನ ಕುತ್ತಿಗೆಗೆ ಹಾಕಿ ಜೋರಾಗಿ ನಿಮ್ಮತ್ತ ಎಳೆಯಿರಿ. ಉಸಿರಾಟಕ್ಕೆ ತೊಂದರೆಯಾಗಿ ಅಸಹಾಯಕನಾಗುತ್ತಾನೆ. ದುಪ್ಪಟ್ಟಾ ಅಥವಾ ಹ್ಯಾಂಡ್ ಬ್ಯಾಗ್ ಇಲ್ಲದಿದ್ದರೆ ಚಾಲಕನ ಅಂಗಿಯ ಕಾಲರ್ ಅನ್ನು ಹಿಡಿದು ಜೋರಾಗಿ ಹಿಂದಕ್ಕೆ ಎಳೆಯಿರಿ. ಅಂಗಿಯ ಮೇಲಿನ ಮೊದಲ ಗುಂಡಿ ಉಸಿರಾಟಕ್ಕೆ ಅಡ್ಡಿಪಡಿಸುತ್ತದೆ.

ನೀವು ಒಂಟಿಯಾಗಿ ಮನೆಯಲ್ಲಿದ್ದಾಗ ಮನೆ ಒಳಗೆ ನುಗ್ಗಿದ ಆಗಂತುಕ ಹಲ್ಲೆಗೆ ಪ್ರಯತ್ನಿಸಿದರೆ ರಕ್ಷಿಸಿಕೊಳ್ಳಲು ಪಾತ್ರೆಗಳನ್ನು ನೆಲಕ್ಕೆ ಚೆಲ್ಲಿರಿ, ಆತನ ಕಡೆಗೂ ಎಸೆಯಿರಿ. ಜೋರಾಗಿ ಕೂಗಿಕೊಳ್ಳಿ. ಹಂತಕರಿಗೆ ಶಬ್ದವೆಂದರೆ ಅತೀ ಭಯ.



ಸರ್ಕಾರಿ ಬಸ್‌ನಲ್ಲೇ ಪ್ರಯಾಣಿಸಿ. ಬೆಂಗಳೂರು ಸೇರಿದಂತೆ ಅನೇಕ ನಗರಗಳಲ್ಲಿ ಇಂಟರ್ ನೆಟ್/ಮೊಬೈಲ್ ಮೂಲಕ ಟ್ಯಾಕ್ಸಿ ಬುಕ್ ಮಾಡುವ ಸೌಲಭ್ಯವಿದೆ. ಇದು ಸುರಕ್ಷಿತ. ಆಟೋಗಿಂತ ಮಿತವ್ಯಯಿ. ಇದಲ್ಲದೆ ನಿಮ್ಮ ಪ್ರಯಾಣವನ್ನು ನೀವಲ್ಲದೆ, ಮನೆಯವರು, ಸ್ನೇಹಿತರು ಟ್ರಾಕ್ ಮಾಡಬಹುದು.

ಬಹಳಷ್ಟು ಲೈಂಗಿಕ ಕಿರುಕುಳ ಪರಿಚಿತರಿಂದಲೇ ಆಗುತ್ತಿವೆ. ಆದ್ದರಿಂದ ಇಂಥವರ ಮೇಲೆ ಕುರುಡು, ಭಾವನಾತ್ಮಕ ನಂಬಿಕೆ ಬೇಡ. ಸ್ನೇಹಿತ ನಿಮ್ಮನ್ನು ಒಂಟಿಯಾಗಿ ಪಾರ್ಟಿ ಅಥವಾ ಮನೆಗೆ ಕರೆದಾಗ ಹೋಗುವ ಬಗ್ಗೆ ಹತ್ತು ಬಾರಿ ಯೋಚಿಸಿ ನಿರ್ಧರಿಸಿ. ಹುಡುಗನನ್ನು ಪ್ರೀತಿಸಿ,ದೇಹ ಸಂಪರ್ಕ ಮಾಡಿ ಮೋಸ ಹೋದೆ ಎಂದು ಮರುಗದಿರಿ.

'ಹುಡುಗರು ಹುಡುಗಿಯರ ಆಕರ್ಷಣೆಗೆ ಒಳಗಾಗುವುದು ದೇಹ ಸುಖದ ಕುತೂಹಲಕ್ಕೆ. ಕೆಲ ಹುಡುಗರು ಅಪವಾದವಾಗಿರಬಹುದು. ದೇಹ ಸಂಪರ್ಕ ಬೇಡವೆಂದು ದೃಢವಾಗಿ ಹೇಳಿ. ಕೋಪಗೊಂಡರೆ ಆತನನ್ನು ಮರೆತು ಬಿಡಿ. ಯಾರು ದೇಹ ಸುಖಕ್ಕೆ ಒತ್ತಾಯಿಸುತ್ತಾರೋ ಅದು ನಿಜವಾದ ಪ್ರೀತಿಯಲ್ಲ. ಭಾವಾವೇಶದಲ್ಲಿ ಸೋಲಬೇಡಿ' ಎನ್ನುತ್ತಾರೆ ಆಪ್ತ ಸಮಾಲೋಚಕಿ ಶಾಂತಾ ನಾಗರಾಜ.

ಇದಲ್ಲದೆ ಮದುವೆಯಾಗುವುದಾಗಿ ಮೋಸ ಮಾಡಿದ ಎಂಬ ಮಹಿಳೆಯ ಆರೋಪ ಶಿಕ್ಷಾರ್ಹವಲ್ಲ ಎನ್ನುತ್ತದೆ ಇತ್ತೀಚಿನ ಕೋರ್ಟ್ ಆದೇಶ. ಇದಕ್ಕೆ ಪೂರಕವಾದ ಸುದ್ದಿ ಈ ವರ್ಷದಾರಂಭದಲ್ಲಿ ಬಂದಿದೆ. 'ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರವೆಸಗಿದ್ದಾನೆಂದು ಯುವತಿಯೊಬ್ಬಳು ಆರೋಪಿಸಿ ಕಟಕಟೆ ಹತ್ತಿಸಿದ್ದ ವ್ಯಕ್ತಿಯನ್ನು ದಿಲ್ಲಿ ಹೈಕೋರ್ಟ್ ಖುಲಾಸೆಗೊಳಿಸಿದೆ. ಇದಕ್ಕೆ ಕಾರಣ ವಯಸ್ಸಿನ ಆತುರದಲ್ಲಿ ಸಹಮತದ ಲೈಂಗಿಕ ಕ್ರಿಯೆ ನಡೆದಿದೆ ಎಂಬುದು.

ಮಹಿಳೆಯರೇ, ನಿಮ್ಮ ಭಾವನೆ, ಆರೋಗ್ಯ, ಯಶಸ್ಸು, ಸಾಧನೆ ಎಲ್ಲವೂ ನಿಮ್ಮ ಕೈಯ್ಯಲ್ಲೇ ಇದೆ. ಪುರುಷರ ಮರುಳು ಮಾತಿಗೆ ತಲೆಬಾಗಿ ನಿಮ್ಮತನ ಕಳೆದುಕೊಳ್ಳಬೇಡಿ. ಸಾಧನೆಯ ಹಾದಿಯತ್ತ ಗಮನಹರಿಸಿ ಬಾಳನ್ನು ಹಸನುಗೊಳಿಸಿ. ■